**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕೋರ್ಟ್,**
**ಬಸವನ ಬಾಗೇವಾಡಿ.**

ಸಿಸಿ ನಂಃ 53/2015

ಸಿಡಬ್ಲೂ 6 ಪಿಡಬ್ಲೂ 04

| | | |
|---|---|---|
| ಸಾಕ್ಷಿದಾರರ ಹೆಸರು | ಶ್ರೀಶೈಲ್ ಸಿದ್ದನಾಥ | |
| ತಂದೆ ಹೆಸರು | ಮುತ್ತಪ್ಪ | |
| ವಯಸ್ಸು | 38 | ವರ್ಷ |
| ಉದ್ಯೋಗ | ಒಕ್ಕಲುತನ | |
| ವಾಸಸ್ಥಳ | ಚಿಮ್ಮಲಗಿ | |

**ಸಾಕ್ಷಿಯನ್ನು ಇಂದು ದಿನಾಂಕಃ 04.08.2026 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.**
**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದ**

1. ಚಾಸಾ-1 ನನ್ನ ಅಜ್ಜ. ಚಾಸಾ-4 ರವರು ನನ್ನ ತಂದೆ. ಚಾಸಾ-5 ರವರು ನನ್ನ ಚಿಕ್ಕಪ್ಪ. ಚಾಸಾ-7 ರಿಂದ 10 ರವರು ನಮ್ಮ ಸಂಬಂಧಿಕರು ಮತ್ತು ನಮ್ಮ ಊರಿನವರು. ಆರೋಪಿತರು ನನ್ನ ಸಂಬಂಧಿಕರು ಆಗಬೇಕು. ದಿಃ 28.06.2014 ರಂದು ಮಧ್ಯಾಹ್ನ 01.15 ಗಂಟೆಗೆ 1 ಮತ್ತು 2 ನೇ ಆರೋಪಿತರು ತಮ್ಮ ಬಿಗರನ್ನು ಕರೆದುಕೊಂಡು ಬಂದು ಆಸ್ತಿಯ ವಿಚಾರವಾಗಿ ನಮ್ಮೊಂದಿಗೆ ಜಗಳ ತೆಗೆದಿರುತ್ತಾರೆ. 3 ನೇ ಆರೋಪಿಯು ಚಾಸಾ-1 ರವರ ಹಿಂದಿನಿಂದ ಬಂದು ಕುತಗಿ ಹಿಚಗಿರುತ್ತಾರೆ. 4 ನೇ ಆರೋಪಿಯು ಚಾಸಾ-1 ರವರಿಗೆ ಮರ್ಮಾಂಗಕ್ಕೆ ಒದ್ದಿರುತ್ತಾರೆ. ಉಳಿದ ಆರೋಪಿತರು ಸಹ ಚಾಸಾ-1, ಚಾಸಾ-4,5,10 ಮತ್ತು ನನಗೆ ಕೈಯಿಂದ ಮತ್ತು ಚಪ್ಪಲಿಯಿಂದ ಹೊಡೆದಿರುತ್ತಾರೆ. ಸದರಿ ಆರೋಪಿತರೆಲ್ಲರೂ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ನಂತರ ಗಲಾಟೆಯನ್ನು ಚಾಸಾ-7 ರಿಂದ 9 ರವರು ಜಗಳವನ್ನು ಬಿಡಿಸಿರುತ್ತಾರೆ. ನಂತರ ಆರೋಪಿತರು ನಮಗೆ ಪ್ರಾಣ ಬೆದರಿಕೆ ಹಾಕಿರುತ್ತಾರೆ..

ನಂತರ ನಾವು ಈ ಕುರಿತು ಪೋಲಿಸ್ ಠಾಣೆಗೆ ಹೋಗಿ ದೂರನ್ನು ಚಾಸಾ-1 ರವರ ಮೂಲಕ ನೀಡಿರುತ್ತೇವೆ. ನಂತರ ನಾವು ಆಸ್ಪತ್ರೆಗೆ ಹೋಗಿ ಚಿಕಿತ್ಸೆಯನ್ನು ಪಡೆದಿರುತ್ತೇವೆ. ಪೋಲಿಸರು ನನ್ನನ್ನು ಘಟನೆಯ ಕುರಿತು ವಿಚಾರಣೆ ಮಾಡಿ ನನ್ನ ಹೇಳಿಕೆಯನ್ನು ಪಡೆದಿರುತ್ತಾರೆ.

2. ನಾನು ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ 1,3,5 ರಿಂದ 7,9 ನೇ ಆರೋಪಿತರನ್ನು ಗುರುತಿಸಿರುತ್ತಾರೆ. ಈ ದಿನ 2,4,8 ನೇ ಆರೋಪಿತರು ನ್ಯಾಯಾಲಯದಲ್ಲಿ ಗೈರು ಹಾಜರಾಗಿದ್ದು ಸದರಿ ಆರೋಪಿತರ ಗುರುತಿಸುವಿಕೆಯ ಬಗ್ಗೆ ತಕರಾರು ಇಲ್ಲ ಎಂದು ಆರೋಪಿತರ ಪರ ವಕೀಲರು ಹೇಳಿರುತ್ತಾರೆ.

**ಪಾಟೀ ಸವಾಲು ಃ 1,3 ರಿಂದ 5 ನೇ ಆರೋಪಿತರ ಪರ ಶ್ರೀ ವಿ.ಬಿ.ಎಮ್ ವಕೀಲರಿಂದಃ-**

**1.** ದೂರನ್ನು ಚಾಸಾ-1 ರವರು ಕೊಟ್ಟಿರುತ್ತಾರೆ. ಗಲಾಟೆಯಾದ ದಿನವೇ ಚಾಸಾ-1 ರವರು ದೂರನ್ನು ಕೊಟ್ಟಿರುತ್ತಾರೆ. ಸದರಿ ದೂರಿನಲ್ಲಿ ಎನೂ ಬರೆದಿರುತ್ತಾರೆ ಎಂಬುದು ನನಗೆ ಗೊತ್ತಿರುತ್ತದೆ. ಸಾಕ್ಷಿಯು ಮುಂದುವರೆದು ಸದರಿ ದೂರನ್ನು ನಾನೇ ಬರೆದಿರುತ್ತೇನೆ. ಆರೋಪಿತರುಗಳು ನನ್ನ ಚಿಕ್ಕಪ್ಪ ಮತ್ತು ಅವರ ಬಿಗರು ಎಂದರೆ ಸರಿ. ಆರೋಪಿತರುಗಳು ಕಡ್ಲಿಮಟ್ಟಿಯಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ. ಯಲ್ಲಪ್ಪನ ಸೊಸೆಯಾದ ಯಲ್ಲವ್ವ ಎಂಬುವವಳು ನಮ್ಮ ಮೇಲೆ ಪಾಲು ವಿಭಾಗ ಕೋರಿ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ನಮ್ಮ ಕುಟುಂಬದ ಆಸ್ತಿಗಳು ನಮ್ಮ ಅಜ್ಜಂದಿರಾದ ಯಲ್ಲಪ್ಪ ಮತ್ತು ಗುರುಲಿಂಗಪ್ಪರವರ ಸ್ವಾಧೀನಾನುಭವದಲ್ಲಿ ಇರುತ್ತದೆ ಎಂದರೆ ಸರಿ.

2. ನಮಗೂ ಮತ್ತು ಆರೋಪಿತರಿಗೂ ಸಿವಿಲ್ ದಾವೆಯು ಚಾಲ್ತಿಯಲ್ಲಿರುವುದರಿಂದ ನಮಗೂ ಮತ್ತು ಆರೋಪಿತರಿಗೂ ಮನಸ್ಸಾ ಮನಸ್ಸು ಸರಿ ಇಲ್ಲ ಎಂದರೆ ಸರಿ. ಆರೋಪಿತರಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ಚಾಸಾ-1 ರವರ ಮೂಲಕ ಸುಳ್ಳು ದೂರನ್ನು ಕೊಡಿಸಿರುತ್ತೇವೆ ಎಂದರೆ ಸರಿ. ಆರೋಪಿತರುಗಳು ಒಬ್ಬ ಒಬ್ಬರಾಗಿ ಚಾಸಾ-1 ರವರಿಗೆ ಒದ್ದಿರುತ್ತಾರೆ. 5 ನೇ ಆರೋಪಿಯು ನನಗೆ ಬಾಯಿಂದ ಕಚ್ಚಿರುತ್ತಾನೆ. 6 ನೇ ಆರೋಪಿಯು ಚಾಸಾ-1 ರವರಿಗೆ ಹೊಡೆದಿರುತ್ತಾನೆ. 9 ನೇ ಆರೋಪಿಯು ನನಗೆ, ಚಾಸಾ-1,5 ಮತ್ತು 10 ರವರಿಗೆ ಹೊಡೆದಿರುತ್ತಾರೆ.

3. ನನಗೆ ಗಲಾಟೆಯಲ್ಲಿ ರಕ್ತಗಾಯವಾಗಿರುತ್ತದೆ. ಸದರಿ ರಕ್ತವು ನನ್ನ ಬಟ್ಟೆಗಳಿಗೆ ಹತ್ತಿತ್ತು. ನಾನು ಪೋಲಿಸರಿಗೆ ನನ್ನ ರಕ್ತಸಿಕ್ತವಾದ ಬಟ್ಟೆಯನ್ನು ಕೊಟ್ಟಿರುವುದಿಲ್ಲ. ಪೋಲಿಸರು ನನ್ನ ಹೇಳಿಕೆಯನ್ನು ದಿಃ 29.06.2014 ರಂದು ವಿಜಯಪೂರದ ವಾಸುದೇವ ಆಸ್ಪತ್ರೆಯಲ್ಲಿ ಪಡೆದಿರುತ್ತಾರೆ. ಪೋಲಿಸರು ನನ್ನ ಹೇಳಿಕೆಯನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ನಮ್ಮ ಊರಿನಲ್ಲಿ ಯಾವುದೇ ಸರ್ಕಾರಿ ಆಸ್ಪತ್ರೆ ಇರುವುದಿಲ್ಲ. ನಾನು ಮೊದಲು ನಿಡಗುಂದಿಯ ಸರ್ಕಾರಿ ಆಸ್ಪತ್ರೆ ಯಲ್ಲಿ ಚಿಕಿತ್ಸೆಯನ್ನು ಪಡೆದಿರುತ್ತೇನೆ.

4. ಆರೋಪಿತರುಗಳು ನಮ್ಮೊಂದಿಗೆ ಗಲಾಟೆ ಮಾಡಿರುತ್ತಾರೆ, ಅವರುಗಳು ನಮಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಮತ್ತು ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲಿಸರು ನನ್ನ ಹೇಳಿಕೆಯನ್ನು ಪಡೆಯದೇ ಇದ್ದರೂ ಕೂಡಾ ಪೋಲಿಸರು ನನ್ನ ಹೇಳಿಕೆಯನ್ನು ಪಡೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ

ಸರಿಯಲ್ಲ. ಗಲಾಟೆಯನ್ನು ಚಾಸಾ-7 ರಿಂದ 9ರವರು ಬಿಡಿಸಿರುತ್ತಾರೆ. ಚಾಸಾ-7 ರಿಂದ 9ರವರು ಯಾವುದೇ ಗಲಾಟೆಯನ್ನು ಬಿಡಿಸಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಚಾಸಾ-1ರವರು ಸೇರಿಕೊಂಡು ಆರೋಪಿತರಿಗೆ ತೊಂದರೆ ಕೊಡಲು ಸುಳ್ಳು ಪ್ರಕರಣವನ್ನು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಃ 1,3 ರಿಂದ 5ನೇ ಆರೋಪಿತರ ಪರ ಶ್ರೀ ವಿ.ಬಿ.ಎಮ್ ವಕೀಲರು ಮಾಡಿರುವ ಪಾಟೀ ಸವಾಲನ್ನು 2ನೇ ಆರೋಪಿ ಪರ ವಕೀಲರು ಅಳವಡಿಸಿಕೊಳ್ಳುವುದಾಗಿ ಹೇಳಿರುತ್ತಾರೆ.**

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ.ಸರಿ.ಅದೆ.

1ನೇ **ಹೆಚ್ಚುವರಿ ಸಿವಿಲ್**
**ನ್ಯಾಯಾಧೀಶರು, ವ ಜೆ.ಎಮ್.ಎಫ್.ಸಿ.**
**ಬಸವನ ಬಾಗೇವಾಡಿ.**